ಸ್ವಲ್ಪ ನಷ್ಟವೇ ಆಗಿರಬಹುದು. ಆದರೆ ಜನ ಇದರಲ್ಲಿ ಮಾಧವನ್ ಪಿಳ್ಳೈ ಸಿಕ್ಕಾಪಟ್ಟೆ ದುಡ್ಡು ಹೊಡೆದುಬಿಟ್ರು ಅಂತ ಮಾತಾಡ್ಕೊತಾರೆ. ಅದಿರಲಿ, ಈಗ ನಾವು ಸೀದಾ ಮುವಟ್ಟುಪುಜಗೆ ಹೋಗಿಬಿಡೋಣ. ನಾಳೆ ಬೇಕಾದರೆ ಎರ್ನಾಕುಲಂಗೆ ಬಂದು ಓಡಾಡಿಕೊಂಡು ಹೋಗಬಹುದು. ಹೊಟ್ಟೆಗೆ ಏನಾದರೂ ತಗೋತಿರಾ?' ಕೇಳಿದ್ದಳು. ಕಾರು ನ್ಯಾಷನಲ್ ಹೈವೇಯಿಂದ ಮುವಟ್ಟುಪುಜ ಕಡೆಯ ರಸ್ತೆಗೆ ತಿರುಗಿಕೊಂಡಿತ್ತು.

'ಅಂಥ ಹಸಿವೇನೂ ಇಲ್ಲ. ಫ್ಲೈಟ್ನಲ್ಲಿ ಒಂದಿಷ್ಟು ತಿಂದಿದ್ದೆ'.

'ಕೇರಳದಲ್ಲಿ ಹಸಿವು ಜಾಸ್ತಿ. ಎಲ್ಲಾ ಕೋಸ್ಟಲ್ ಏರಿಯಾಗಳಲ್ಲೂ ಅದು ಸಾಮಾನ್ಯ ಲಕ್ಷಣ' ಎಂದವಳು ನಕ್ಕಿದ್ದಳು.

'ಹಸಿವಿದ್ದರೆ ಆರೋಗ್ಯವೂ ಚೆನ್ನಾಗಿರುತ್ತದೆ' ನಾನು ಮಾತು ಸೇರಿಸಿದ್ದೆ.

'ಶ್ರೀಮಂತರಿಗೆ ಹಸಿವಿರುವುದಿಲ್ಲ, ಬಡವರಿಗೆ ಆಹಾರವಿರುವುದಿಲ್ಲ'. ಅವಳು ಜೋಕ್ ಥರ ಹೇಳಿದ್ದರೂ ವಾಸ್ತವದಲ್ಲಿ ಅದು ಅಪ್ಪಟ ಸತ್ಯವೇ ಆಗಿತ್ತು.

'ಗುಡ್, ಭಾರತವನ್ನು ಚೆನ್ನಾಗಿ ತಿಳಿದುಕೊಂಡಿದ್ದೀಯ' ತಾರೀಫು ಮಾಡಿದ್ದೆ.

'ಮೆಡಿಸಿನ್ ಓದುವುದರ ಜೊತೆಗೆ ಒಂದಿಷ್ಟಿಷ್ಟು ಇತಿಹಾಸ, ಸಾಹಿತ್ಯ, ರಾಜಕೀಯ, ಸಮಾಜಶಾಸ್ತ್ರವನ್ನೂ ಓದಿಕೊಂಡಿದ್ದೀನಿ. ಅಪ್ಪ ಫೆರೋಷಿಯಸ್ ರೀಡರ್. ಅವರ ಗುಣ ಸ್ವಲ್ಪ ನನಗೂ ಬಂದಿರಬೇಕು'. ಮಾತು ನಿಲ್ಲಿಸಿ ಕಾರನ್ನು ರಸ್ತೆಯ ಪಕ್ಕದ ದೊಡ್ಡ ಕಾಂಪೌಂಡ್ ಒಂದರಲ್ಲಿ ತಿರುಗಿಸಿ ನಿಲ್ಲಿಸಿದ್ದಳು. ಅದೊಂದು ಹೋಟೆಲಿನಂತೆ ಕಂಡಿತ್ತು ನನಗೆ.

ಅದೊಂದು ಆರ್ಗ್ಯಾನಿಕ್ ಕೆಫೆಯಾಗಿತ್ತು. ದೇಶಿ ಕೇರಳ ಶೈಲಿಯಲ್ಲಿ ಅಚ್ಚುಕಟ್ಟಾಗಿ ವಿನ್ಯಾಸ ಮಾಡಲಾಗಿದ್ದ ಕೆಫೆಯನ್ನು ಪ್ರವೇಶಿಸುತ್ತಿದ್ದಂತೆ ಅಪರೂಪದ ತೆಳ್ಳನೆಯ ಸುವಾಸನೆಯ ಹೂ ಮೈ ಸವರಿದಂತೆ ಅನುಭವವಾಗಿತ್ತು. ಕುಳಿತುಕೊಳ್ಳಲು ಗಾರೆ ನೆಲದ ಮೇಲೆ ಹತ್ತಿಯ ಮೆತ್ತನೆಯ ಗಾದಿಗಳನ್ನು ಹಾಸಲಾಗಿತ್ತು ಮತ್ತು ಕಾಲುಗಳನ್ನು ಆರಾಮವಾಗಿ ಚಾಚಿಕೊಳ್ಳಲು ಟಿಂಬರ್ ಡೈನಿಂಗ್ ಟೇಬಲ್‌ಗಳ ಕೆಳಗೆ ಸ್ಥಳಾವಕಾಶವನ್ನು ಮಾಡಲಾಗಿತ್ತು. ಹಾಗಾಗಿ ಗಿರಾಕಿಗಳು ಆರಾಮವಾಗಿ ಕಾಲು ಚಾಚಿಕೊಂಡು ಆಹಾರ ಪಾನೀಯಗಳನ್ನು ಸೇವಿಸಬಹುದಾಗಿತ್ತು. ಕೆಫೆಯಲ್ಲಿ ವ್ಯವಸ್ಥಾಪಕರಿಂದ ಹಿಡಿದು ಅಡುಗೆ ಮಾಡುವವರು, ಬಡಿಸುವವರು, ಕ್ಲೀನ್ ಮಾಡುವವರು ಎಲ್ಲರೂ ಮಹಿಳೆಯರೇ ಆಗಿದ್ದರು. ಕೆಫೆಯ ಪ್ರತಿಯೊಬ್ಬರೂ ಅರುಂಧತಿಗೆ ವಿಶ್ ಮಾಡುತ್ತಿದ್ದರು. ಬದಲಾಗಿ ಅವಳು ಕೂಡ ನಗುತ್ತಾ ವಿಶ್ ಮಾಡುತ್ತಿದ್ದಳು.

'ನನ್ನ ಫ್ರೆಂಡ್ ಕೆಫೆ. ನನಗಿಂತ ಎರಡು ವರ್ಷ ಜೂನಿಯರ್. ಮೆಕಾನಿಕಲ್ ಇಂಜಿನಿಯರಿಂಗ್ ಮಾಡಿ, ಕೆಲಸಕ್ಕೆ ಹೋಗದೆ ಎರಡು ವರ್ಷಗಳ ಹಿಂದೆ ಈ ಕೆಫೆ ಶುರು ಮಾಡಿದಳು. ತುಂಬಾ ಚೆನ್ನಾಗಿ ಪಿಕಪ್ ಆಗಿದೆ. ಒಂದೇ ವರ್ಷದಲ್ಲಿ ಲೋನ್ ತೀರಿಸಿದಳು. ಕೆಫೆಯ ವಿಶಿಷ್ಟತೆಯೆಂದರೆ ಓನರಿಂದ ಹಿಡಿದು ಕ್ಲೀನರ್‌ವರೆಗೂ ಮಹಿಳೆಯರೇ' ಎಂದು ಗಾದಿಯ ಮೇಲೆ ಕುಳಿತುಕೊಳ್ಳುತ್ತಾ ಹೇಳಿದಳು. 'ಪುರುಷರಿಗಿಂತ ಮಹಿಳೆಯರು ಹೆಚ್ಚು ಕ್ರಿಯಾಶೀಲರು ಎಂಬುದು ಎಂದೋ ಸಾಬೀತಾಗಿದೆ. ನಮ್ಮ ದೇಶದ ಹಳ್ಳಿಗಾಡಿನ ಕೌಟುಂಬಿಕ ಬದುಕಿನ ಆರ್ಥಿಕತೆಯನ್ನು ಶತ ಶತಮಾನಗಳ ಕಾಲ ಸಂರಕ್ಷಿಸಿಕೊಂಡು ಬಂದವರೇ ಮಹಿಳೆಯರು. ಭಾರತದ ಕೃಷಿಯನ್ನು ಮಹಿಳೆಯರಿಲ್ಲದೆ ಕಲ್ಪಿಸಿಕೊಳ್ಳಲು ಕೂಡ ಸಾಧ್ಯವಾಗುವುದಿಲ್ಲ. ಇಷ್ಟಕ್ಕೂ ಜೀವ ಜಗತ್ತಿನ ಸಕಲ ಪ್ರಭೇದಗಳಲ್ಲೂ ಸೃಷ್ಟಿ ಮತ್ತು ಸೃಷ್ಟಿಕ್ರಿಯೆ ಎರಡೂ ಅನುಸಂಧಾನಗೊಳ್ಳುವುದು ಹೆಣ್ಣಿನಲ್ಲಿ ಮಾತ್ರವೇ ಅಲ್ಲವೇ'. ಅನೇಕ ವರ್ಷಗಳ ಹಿಂದೆ ನನ್ನ ಪಿಎಚ್.ಡಿ. ಪ್ರಬಂಧದಲ್ಲಿ ಬರೆದಿದ್ದ ಸಾಲುಗಳು ನೆನಪಾಗಿ ಅವಳನ್ನು ಉತ್ತೇಜಿಸಲೆಂಬಂತೆ ಹೇಳಿದ್ದೆ. ಕೊಬ್ಬರಿ ಎಣ್ಣೆಯಲ್ಲಿ ಕರಿದ ಬಿಸಿ ಬಾಳೇಕಾಯಿ ಚಿಪ್ಸ್ ತಿಂದು, ಒಂದೊಂದು ಗ್ಲಾಸ್ ಕೋಕಮ್ ಹಣ್ಣಿನ ಜ್ಯೂಸ್ ಕುಡಿದು ಕಾರಿನ ಹತ್ತಿರ ನಡೆಯುವಾಗ,

'ಭಾರತವೇ ಏನು, ಅಮೆರಿಕ ಮತ್ತು ಯೂರೋಪ್ ದೇಶಗಳಲ್ಲೂ ಆರ್ಗ್ಯಾನಿಕ್ ಕ್ರೇಜ್ ವಿಪರೀತವಾಗುತ್ತಿದೆ. ಇದರಲ್ಲೂ ಮೋಸಗಳು, ಲಾಭಕೋರತನ ಹೆಚ್ಚಾಗಿ ನಡೆಯುತ್ತಿವೆ. ಆದರೆ ನನ್ನ ಫ್ರೆಂಡ್ ತುಂಬಾ ಪ್ರಾಮಾಣಿಕವಾಗಿ ನಡೆಸುತ್ತಿದ್ದಾಳೆ. ವ್ಯಾಪಾರದಲ್ಲಿ ಒಂದಿಷ್ಟು ಎಥಿಕ್ಸ್ ಇದ್ದರೇನೇ ಒಳ್ಳೆಯದು. ಆದ್ದರಿಂದಲೇ ಎರ್ನಾಕುಲಂನಲ್ಲೂ ಇದರ ಒಂದು ಬ್ರಾಂಚ್ ತೆರೆಯಲು ಸಿದ್ಧತೆ ನಡೆಸುತ್ತಿದ್ದಾಳೆ. ಮೋಸ್ಟ್ಲಿ ಮುಂದಿನ ತಿಂಗಳ ಕಡೆಯ ವಾರದಲ್ಲಿ ಶುರುವಾಗಬಹುದು. ನಾನೇ ಉದ್ಘಾಟನೆ ಮಾಡಬೇಕೆಂದು ಹಟ ಹಿಡಿದಿದ್ದಾಳೆ. ತುಂಬಾ ಶ್ರಮದ ಹುಡುಗಿ. ಹೆಲ್ತ್ ಬಗ್ಗೆ ಏನಾದ್ರೂ ಟಿಪ್ಸ್ ಬೇಕಾದ್ರೆ ನನಗೆ ಫೋನ್ ಮಾಡ್ತಾಳೆ'.

ನಾವು ಕಾರು ಹತ್ತುವಾಗ ಹೊರಗಡೆ ಹೋಗಿದ್ದ ಓನರ್ ಹಳೆ ಮಾರುತಿ 800 ಕಾರಿನಲ್ಲಿ ಬಂದಿಳಿದವಳು ನಮ್ಮ ಕಾರಿನ ಬಳಿ ಓಡಿಬಂದು ಅರುಂಧತಿ ಪಿಳ್ಳೈಯಳ ಕೈ ಕುಲುಕಿದ್ದಳು. ನಸುಗೆಂಪು ಬಣ್ಣದ ಯುವತಿ ತುಸು ಕುಳ್ಳಗಿದ್ದರೂ ಆಕರ್ಷಕವಾಗಿದ್ದಳು. ಮುಖದಲ್ಲಿ ಉತ್ಸಾಹದ ಛಾಯೆ ಎದ್ದು ಕಾಣುತ್ತಿತ್ತು. ಕಾರು ಅಲ್ಲಿಂದ ಕಿಲೋಮೀಟರ್ ದೂರ ಸಾಗಿತ್ತು. 'ಇವಳ ಅಪ್ಪ ನಮ್ಮಲ್ಲಿ ರಬ್ಬರ್ ಸಾಗಿಸುವ ಲಾರಿಯ ಡ್ರೈವರ್ ಆಗಿದ್ದ. ಇವಳ ಅಮ್ಮ ನಮ್ಮ ತೋಟ ಮತ್ತು ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದಳು. ನಾನು ಪಿಯುಸಿಯಲ್ಲಿದ್ದಾಗ ಲಾರಿ ಅಪಘಾತದಲ್ಲಿ ಇವಳ ಅಪ್ಪ ಸತ್ತುಹೋಗಿದ್ದ. ಇವಳನ್ನು ಅಪ್ಪನೇ ಇಂಜಿನಿಯರಿಂಗ್ ಓದಿಸಿದ್ದು, ಕೆಫೆ ಶುರುಮಾಡಿದಾಗ ಸ್ವಲ್ಪ ಫೈನಾನ್ಸಿಯಲ್ ಸಪೋರ್ಟ್ ಕೂಡ ಮಾಡಿದ್ದು' ಎಂದು ಅವಳು ಖುಷಿಯಿಂದಲೇ ಹೇಳಿದ್ದಳು.

'ನಿಮ್ಮ ತಂದೆ ನಿಜಕ್ಕೂ ಸಹೃದಯಿ. ಸಾಮಾನ್ಯವಾಗಿ ಬಂಡವಾಳಶಾಹಿಗಳು ಇಂಥ ಅನ್ಯರ ಆರ್ಥಿಕ ಜವಾಬ್ದಾರಿಗಳಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿರುತ್ತಾರೆ. ಮತ್ತು ಬೇರೆಯವರು ಬೆಳೆಯದಂತೆ ಸದಾ ಕಾವಲು ಕಾಯುತ್ತಿರುತ್ತಾರೆ. ಅಂತಹುದರಲ್ಲಿ ನಿಮ್ಮ ತಂದೆ ಹೀಗೆ ಮಾಡುತ್ತಿರುವುದು ಅವರಲ್ಲಿ ಉಸಿರಾಡುತ್ತಿರುವ ಮಾರ್ಕ್ಸಿಸಂ ಮತ್ತು ಸೆಕ್ಯುಲರಿಸಂನಿಂದ ಇರಬೇಕು'. ಮೆಚ್ಚುಗೆ ವ್ಯಕ್ತಪಡಿಸಿದ್ದೆ.

'ಇವಳು ನಮ್ಮ ಅಪ್ಪನಿಗೆ ಹುಟ್ಟಿದವಳೆಂದು ಜನ ನಾನು ಚಿಕ್ಕವಳಾಗಿರುವಾಗಿನಿಂದಲೂ ಮಾತನಾಡಿಕೊಳ್ಳುತ್ತಾರೆ. ಆ ಬಗ್ಗೆ ಇವೊತ್ತಿನವರೆಗೂ ನಾನು ಕಿಂಚಿತ್ತೂ ತಲೆ ಕೆಡಿಸಿಕೊಂಡವಳಲ್ಲ. ಮೆಡಿಸಿನ್ ಓದಲು ಶುರುವಾದ ಮೇಲಂತೂ ಮನುಷ್ಯನ ದೇಹದ ಭಾಗಗಳ ಮತ್ತು ಅವುಗಳ ಕಾರ್ಯವೈಖರಿಯ ಬಗ್ಗೆ ಸಾಕಷ್ಟು ತಿಳಿವಳಿಕೆ ಮೂಡಿದೆ. ಹಸಿವು ಮತ್ತು ಕಾಮ ಎಂಬ ನ್ಯಾಚುರಲ್ ಇನ್‌ಸ್ಟಿಂಕ್ಟ್‌ಗಳು ಜಾಗೃತವಾದಾಗ ಮನುಷ್ಯ ಸಹ ಬೇರೆಲ್ಲ ಪ್ರಾಣಿಗಳಂತೆಯೇ ವರ್ತಿಸುತ್ತಾನೆ. ಕಾಮ ಹಸಿವಿಗಿಂತಲೂ ಡೇಂಜರಸ್ ಆಲೋಚನೆಗಳನ್ನು ಮನುಷ್ಯನಲ್ಲಿ ತುಂಬುತ್ತದೆ. ಜೀವ ಜಗತ್ತಿನ ಎಲ್ಲಾ ದೇಹಗಳೂ ಕಾಮ ಜಾಗೃತಿಯಾದಾಗ ಬಹುತೇಕ ಒಂದೇ ರೀತಿ ವರ್ತಿಸುತ್ತವೆ. ಪರಿಚಯವೇ ಇಲ್ಲದ ವಿರುದ್ಧ ಲಿಂಗ ದೇಹಗಳು ಜಾತಿ, ಧರ್ಮ, ಬಣ್ಣ, ಭಾಷೆ, ಪ್ರದೇಶಗಳ ಭೇದವಿಲ್ಲದಂತೆ ಒಂದನ್ನೊಂದು ಸೇರಲು ಹಾತೊರೆಯುತ್ತವೆ. ಇದು ಹಸಿವಿನ ವಿಷಯದಲ್ಲೂ ನಿಜ ಅನ್ನಿಸುತ್ತದೆ. ತೀವ್ರ ಹಸಿವಾದಾಗ ಎಂಥ ಆಹಾರವನ್ನಾದರೂ ಜೀವಜಂತುಗಳು ಆಪೋಶಿಸಲು ತಯಾರಾಗುತ್ತವೆ. ಮೆಡಿಸಿನ್ ಓದುವಾಗ ನನಗೆ ಅಂಥ್ರೋಪಾಲಜಿ ಮತ್ತು ಸೈಕಾಲಜಿ ವಿಷಯಗಳ ಬಗ್ಗೆ ತುಂಬಾ ಆಸಕ್ತಿ ಬಂದು ಓದತೊಡಗಿದೆ. ಅದರಿಂದ ನನಗೆ ವಾಸ್ತವ ಜಗತ್ತನ್ನು ಅರಿತುಕೊಳ್ಳಲು ತುಂಬಾನೇ ಅನುಕೂಲವಾಯಿತು'. ಪ್ರೊಫೆಸರೊಬ್ಬರು ಪಾಠ ಮಾಡುವಂತೆ ಮಾತನಾಡಿದ್ದಳು.

ಭಾಗ–2

ಕಾರು ಅರುಂಧತಿಯ ಮನೆಯ ಮುಂದೆ ನಿಂತಿತ್ತು . ಮೈನ್ ರೋಡಿನಿಂದ ಇಪ್ಪತ್ತು ಮೀಟರ್ ಉದ್ದದ ಸಿಮೆಂಟು ಬ್ರಿಡ್ಜಿನಂತಿದ್ದ ರಸ್ತೆ, ಸುಮಾರು ಮೂವತ್ತೈದು ಅಡಿ ಕೆಳಗಿನಿಂದ ಮೇಲಕ್ಕೆ ಚಾಚಿಕೊಂಡಿದ್ದ ಮೂರಂತಸ್ತಿನ ಮನೆಯನ್ನು ಕೂಡಿಕೊಂಡಿತ್ತು . ಆ ಪ್ರದೇಶದ ಸುಮಾರು ಮನೆಗಳು ಅದೇ ರೀತಿಯಲ್ಲಿ ನಿರ್ಮಾಣವಾಗಿದ್ದವು . ಕಾರು ಮನೆಯ ಕೊನೆಯ ಅಂತಸ್ತಿನ ಮೇಲೆ ನಿಂತಿತ್ತು . ಅದೊಂದು ತುಂಬಾ ವಿಶಾಲವಾದ ಮನೆಯಾಗಿದ್ದು ಅರವತ್ತು ಎಕರೆ ರಬ್ಬರ್ ತೋಟಕ್ಕೆ ತೆರೆದುಕೊಂಡಿತ್ತು . ಮನೆಯ ಮುಂದೆ ಮಾವು , ಹಲಸು ಮರಗಳಲ್ಲದೆ ಅಲ್ಲಲ್ಲಿ ವಿವಿಧ ಬಗೆಯ ಬಾಳೆ ಗಿಡಗಳು. ಸುಮಾರು ಗಿಡಗಳಲ್ಲಿ ಅರ್ಧ ಹಣ್ಣು ಅರ್ಧ ಕಾಯಿ ಹೊತ್ತ ಬಾಳೆಯ ಗೊನೆಗಳು ತೂಗಿ ತೊನೆದಾಡುತ್ತಿದ್ದವು. ಮೂರನೇ ಅಂತಸ್ತಿನ ಮೇಲಿನಿಂದ ಕೆಳಗಿಳಿಯಲು ಮೆಟ್ಟಿಲುಗಳಲ್ಲದೆ ಲಿಫ್ಟ್ ಕೂಡ ಇತ್ತು . ಕಾರು ನಿಲ್ಲುತ್ತಲೇ ಇಬ್ಬರು ವ್ಯಕ್ತಿಗಳು ಓಡಿ ಬಂದಿದ್ದರು. ಒಬ್ಬ ವ್ಯಕ್ತಿ ನನ್ನ ಎರಡೂ ಬ್ಯಾಗುಗಳನ್ನು ಹೊತ್ತು ಮೆಟ್ಟಿಲುಗಳ ಮೂಲಕ